**All India Radio: Bangalore**
**National Bulletin In Kannada**
**08.05.2026  1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**08.05.2026  1.10 p.m.**
**<><><><>**

ಮುಖ್ಯಾಂಶಗಳು

1. ಗುಜರಾತ್‌ನ ಸೋಮನಾಥ ದೇವಾಲಯಕ್ಕೆ ಮೇ ೧೧ರಂದು ಪ್ರಧಾನಿ ನರೇಂದ್ರ ಮೋದಿ ಭೇಟಿ
2. ಡಿಆರ್‌ಡಿಒ ಹಾಗೂ ಐಎಎಫ್ ಒಡಿಶಾದಲ್ಲಿ ನಡೆಸಿದ ದೇಶದ ಮೊದಲ ಸ್ಥಳೀಯ ಗ್ಲೈಡ್ ಆಯುಧ ವ್ಯವಸ್ಥೆಯ ಮೊದಲ ಹಾರಾಟ ಪ್ರಯೋಗ ಯಶಸ್ವಿ
3. ಆಕಾಶವಾಣಿಯ ೯೦ ವರ್ಷಗಳ ಸಂಭ್ರಮಾಚರಣೆ; ಬೆಂಗಳೂರು ಆಕಾಶವಾಣಿ ಕೇಂದ್ರದಿಂದ 'ವಾಕಥಾನ್-೨೦೨೬'ಕ್ಕೆ ಉತ್ತಮ ಸ್ಪಂದನೆ
4. ಆರೋಗ್ಯ ರಕ್ಷಣಾ ವಿತರಣೆ ಬಲಪಡಿಸಲು ಪ್ರಾಥಮಿಕ ಆರೋಗ್ಯ ರಕ್ಷಣಾ ತಂಡಗಳಿಗೆ ಸಮಗ್ರ ತರಬೇತಿಗೆ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಚಾಲನೆ
5. ಐಪಿಎಲ್ ಟಿ-೨೦ ಕ್ರಿಕೆಟ್: ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿಂದು ಡೆಲ್ಲಿ ಕ್ಯಾಪಿಟಲ್ಸ್ - ಕೋಲ್ಕತ್ತಾ ನೈಟ್ ರೈಡರ್ಸ್ ಮುಖಾಮುಖಿ

<><><><>

೧೯೫೧ರಲ್ಲಿ ಭಾರತದ ಮೊದಲ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ಪುನಃಸ್ಥಾಪಿಸಿದ ದೇವಾಲಯವನ್ನು ಉದ್ಘಾಟಿಸಿ ೭೫ ವರ್ಷಗಳನ್ನು ಪೂರೈಸಿದ ಸ್ಮರಣಾರ್ಥ ಪ್ರಧಾನಿ ನರೇಂದ್ರ ಮೋದಿ ಅವರು ಮೇ ೧೧ ರಂದು ಗುಜರಾತ್‌ನ ಸೋಮನಾಥ ದೇವಾಲಯಕ್ಕೆ ಭೇಟಿ ನೀಡಲಿದ್ದಾರೆ. ಪ್ರಧಾನಿ ಇಂದು ನ್ಯಾಷನಲ್ ಡೈಲಿ ಪತ್ರಿಕೆಯಲ್ಲಿ ಈ ಕುರಿತು ಲೇಖನ ಬರೆದು ಈ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ತಮ್ಮ ಲೇಖನದಲ್ಲಿ ಅವರು, ಕೆಲವು ತಿಂಗಳುಗಳಲ್ಲಿ ಸೋಮನಾಥಕ್ಕೆ ಸಂಬಂಧಿಸಿದ ಎರಡು ಪ್ರಮುಖ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ತಮಗೆ ದೊರೆತ ಸೌಭಾಗ್ಯ ಎಂದು ಹೇಳಿದ್ದಾರೆ. ಈ ವರ್ಷದ ಆರಂಭದಲ್ಲಿ, ದೇವಾಲಯದ ಮೇಲಿನ ಮೊದಲ ದಾಳಿ ಸಂಭವಿಸಿ ಒಂದು ಸಾವಿರ ವರ್ಷಗಳಾದ ಹಿನ್ನೆಲೆ ಸೋಮನಾಥ ಸ್ವಾಭಿಮಾನ ಪರ್ವದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು. ಸೋಮನಾಥವು ಭಾರತದ ನಾಗರಿಕತೆಯ ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವದ ಸಂಕೇತ ಎಂದು ಬಣ್ಣಿಸಿರುವ ಪ್ರಧಾನಿ, ದೇವಾಲಯದ ಪ್ರಯಾಣವು ವಿನಾಶದಿಂದ ಸೃಷ್ಟಿಗೆ ಒಂದು ಚಲನೆಯನ್ನು ಪ್ರತಿನಿಧಿಸುತ್ತದೆ. ಪುನರಾವರ್ತಿತ ದಾಳಿಗಳ ಬಳಿಕವೂ ನಂಬಿಕೆ ಮತ್ತು ಸಂಸ್ಕೃತಿ ಹೇಗೆ ಬದುಕಬಲ್ಲದು ಎಂಬುದನ್ನು ಸೋಮನಾಥ ದೇಗುಲ ಪ್ರತೀಕ ಎಂದು ಹೇಳಿದ್ದಾರೆ. ಸ್ವಾತಂತ್ರ್ಯದ ನಂತರ ದೇವಾಲಯವನ್ನು ಪುನರ್ನಿರ್ಮಿಸುವಲ್ಲಿ ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪಾತ್ರವನ್ನು ಪ್ರಧಾನಿ ನೆನಪಿಸಿಕೊಂಡರು. ಸೋಮನಾಥದ ಪುನರ್ನಿರ್ಮಾಣವು ರಾಷ್ಟ್ರೀಯ ಕರ್ತವ್ಯ ಎಂದು ಪಟೇಲ್ ಬಲವಾಗಿ ನಂಬಿದ್ದರು ಎಂದು ಅವರು ಹೇಳಿದರು. ಸೋಮನಾಥನ ಕಥೆಯು ಸರ್ಕಾರದ ವಿಕಾಸ ಹಾಗೂ ಪರಂಪರೆಯ ದೃಷ್ಟಿಕೋನಕ್ಕೆ ಹೊಂದಿಕೆಯಾಗುತ್ತದೆ. ಇದು ಪರಂಪರೆಯ ಸಂರಕ್ಷಣೆಯೊಂದಿಗೆ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತದೆ. ದೇವಾಲಯದ ಇತಿಹಾಸದೊಂದಿಗೆ ಸಂಬಂಧಿಸಿದ ಧೈರ್ಯ ಮತ್ತು ತ್ಯಾಗಗಳನ್ನು ಗೌರವಿಸಲು ಮುಂದಿನ ಒಂದು ಸಾವಿರ ದಿನಗಳವರೆಗೆ ಸೋಮನಾಥದಲ್ಲಿ ವಿಶೇಷ ಪ್ರಾರ್ಥನೆಗಳನ್ನು ನಡೆಸಲಾಗುವುದು ಎಂದು ಪ್ರಧಾನಿ ಹೇಳಿದರು.  ಸೋಮನಾಥಕ್ಕೆ ಭೇಟಿ ನೀಡಿ ದೇಶದ ನಾಗರಿಕತೆಯ ಅತ್ಯುನ್ನತ ಚೈತನ್ಯವನ್ನು ಅನುಭವಿಸುವಂತೆ ಅವರು ದೇಶವಾಸಿಗಳನ್ನು ಒತ್ತಾಯಿಸಿದ್ದಾರೆ.

<><><><>

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ - ಡಿಆರ್‌ಡಿಒ ಮತ್ತು ಭಾರತೀಯ ವಾಯುಪಡೆಯು ನಿನ್ನೆ ಒಡಿಶಾದ ಕರಾವಳಿಯಲ್ಲಿ ಟ್ಯಾಕ್ಟಿಕಲ್ ಅಡ್ವಾನ್ಸ್ಡ್ ರೇಂಜ್ ಆಗ್ಮೆಂಟೇಶನ್-ಟಿಎಆರ್‌ಎ ಶಸ್ತ್ರಾಸ್ತ್ರದ ಮೊದಲ ಹಾರಾಟ-ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿವೆ.

ಮಾಡ್ಯುಲರ್ ರೇಂಜ್ ಎಕ್ಸ್‌ಟೆನ್ಶನ್ ಕಿಟ್-ಟಿಎಆರ್‌ಎ ದೇಶದ ಮೊದಲ ಸ್ಥಳೀಯ ಗ್ಲೈಡ್ ಆಯುಧ ವ್ಯವಸ್ಥೆಯಾಗಿದ್ದು, ಅನಿರ್ದೇಶಿತ ಸಿಡಿತಲೆಗಳನ್ನು ನಿಖರ-ನಿರ್ದೇಶಿತ ಶಸ್ತ್ರಾಸ್ತ್ರಗಳಾಗಿ ಪರಿವರ್ತಿಸುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಟಿಎಆರ್‌ಎಅನ್ನು ಹೈದರಾಬಾದ್‌ನ ಸಂಶೋಧನಾ ಕೇಂದ್ರ ಇಮಾರತ್+ ಮತ್ತು ಇತರ ಡಿಆರ್‌ಡಿಒ ಪ್ರಯೋಗಾಲಯಗಳು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿವೆ.  ಈ ವ್ಯವಸ್ಥೆಯು ನೆಲ-ಆಧಾರಿತ ಗುರಿಗಳನ್ನು ತಟಸ್ಥಗೊಳಿಸುವುದರ ಜತೆಗೆ ಆಯುಧದ ಮಾರಕತೆ ಮತ್ತು ನಿಖರತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದ್ದು, ಅತ್ಯಾಧುನಿಕ ಕಡಿಮೆ-ವೆಚ್ಚದ ವ್ಯವಸ್ಥೆಗಳನ್ನು ಬಳಸುವ ಮೊದಲ ಗ್ಲೈಡ್ ಆಯುಧವಾಗಿದೆ. ಕಿಟ್‌ನ ಅಭಿವೃದ್ಧಿಯನ್ನು ಅಭಿವೃದ್ಧಿ ಹಾಗೂ ಉತ್ಪಾದನಾ ಪಾಲುದಾರರು ಡಿಸಿಪಿಪಿ ಮತ್ತು ಇತರ ಭಾರತೀಯ ಕೈಗಾರಿಕೆಗಳೊಂದಿಗೆ ಕೈಗೊಳ್ಳಲಾಗಿದೆ. ಮೊದಲ ಯಶಸ್ವಿ ಪ್ರಯೋಗಾತ್ಮಕ ಹಾರಾಟಕ್ಕಾಗಿ ಡಿಆರ್‌ಡಿಒ, ಐಎಎಫ್, ಡಿಸಿಪಿಪಿಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಅಭಿನಂದಿಸಿದ್ದಾರೆ. ಭಾರತದ ಸ್ಥಳೀಯ ರಕ್ಷಣಾ ಸಾಮರ್ಥ್ಯಗಳನ್ನು ಮುಂದುವರಿಸುವಲ್ಲಿ ಇದು ಮಹತ್ವದ ಬೆಳವಣಿಗೆ ಎಂದು ಅವರು ಬಣ್ಣಿಸಿದ್ದಾರೆ.

<><><><>

ಜಾಗತಿಕ ಆರ್ಥಿಕ ಸ್ಥಿರತೆಯ ಆಧಾರಸ್ತಂಭವಾಗಿ ಭಾರತದ ಬೆಳೆಯುತ್ತಿದೆ ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಒತ್ತಿ ಹೇಳಿದ್ದಾರೆ. ಇದೇ ವೇಳೆ ಅವರು ಅಂತಾರಾಷ್ಟ್ರೀಯ ಸಮೃದ್ಧಿಗೆ ರಾಷ್ಟ್ರದ ಮಹತ್ವದ ಕೊಡುಗೆಯನ್ನು ಎತ್ತಿ ತೋರಿಸಿದ್ದಾರೆ. ಸುರಿನಾಮ್‌ನ ಪರಮರಿಬೊದಲ್ಲಿಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ 'ಪ್ರಗತಿಗಾಗಿ ಪಾಲುದಾರಿಕೆ' ಎಂಬ ವಿಷಯದ ಕುರಿತು ಮಾತನಾಡಿದರು. ಭಾರತದ ಕೈಗಾರಿಕಾ ಮತ್ತು ಆರ್ಥಿಕ ಆರೋಹಣ ಜಾಗತಿಕ ಸ್ಥಿರತೆಗೆ ಸಾಧನವಾಗಿದೆ. ಭಾರತವು ಅಂತಾರಾಷ್ಟ್ರೀಯ ಆರ್ಥಿಕತೆಯನ್ನು ಅಪಾಯದಿಂದ ಮುಕ್ತಗೊಳಿಸಲು ಸಹಾಯ ಮಾಡುತ್ತಿದೆ. ದೇಶವು ತನ್ನ ಜಾಗತಿಕ ಮಿತ್ರರಾಷ್ಟ್ರಗಳಿಗೆ ಹೆಚ್ಚಿನ ಆಯ್ಕೆಗಳನ್ನು ಸೃಷ್ಟಿಸುತ್ತಿದೆ ಎಂದು ಸಚಿವರು ಹೇಳಿದರು. ಈ ವರ್ಷ ಜಾಗತಿಕ ಬೆಳವಣಿಗೆಯ ಐಎಂಎಫ್ ನಿರೀಕ್ಷೆಯನ್ನು ಗಮನಿಸಿದರೆ, ಅದರಲ್ಲಿ ಭಾರತ ಒಟ್ಟು ಜಾಗತಿಕ ಬೆಳವಣಿಗೆಯ ಶೇಕಡಾ ೧೭ ರಷ್ಟು ಕೊಡುಗೆ ನೀಡುತ್ತದೆ ಎಂದು ಹೇಳಿದರು. ಈ ಮೌಲ್ಯಮಾಪನವು ಐಎಂಎಫ್ ಬಿಡುಗಡೆ ಮಾಡಿದ ಅಂಕಿಅಂಶಗಳೊಂದಿಗೆ ಹೊಂದಿಕೆಯಾಗುತ್ತದೆ. ಇದು ಭಾರತವು ೨೦೨೫ ರಲ್ಲಿ ಜಾಗತಿಕ ನೈಜ ಜಿಡಿಪಿ ಬೆಳವಣಿಗೆಯ ಗಣನೀಯ ಶೇಕಡಾ ೧೭ ರಷ್ಟು ಪಾಲನ್ನು ಹೊಂದಲಿದೆ ಎಂದು ಸೂಚಿಸುತ್ತದೆ. ಇದು ಗ್ರಹದಲ್ಲಿ ವೇಗವಾಗಿ ವಿಸ್ತರಿಸುತ್ತಿರುವ ಪ್ರಮುಖ ಆರ್ಥಿಕತೆಯಾಗಿ ತನ್ನ ಸ್ಥಾನಮಾನವನ್ನು ಕಾಯ್ದುಕೊಳ್ಳುತ್ತದೆ.

**ಧ್ವನಿ: ಎಸ್. ಜೈಶಂಕರ್**

<><><><>

ಆಕಾಶವಾಣಿಯ ೯೦ ವರ್ಷಗಳ ಸಂಭ್ರಮಾಚರಣೆಯ ಅಂಗವಾಗಿ ಬೆಂಗಳೂರು ಆಕಾಶವಾಣಿ ಕೇಂದ್ರದ ವತಿಯಿಂದ ಇಂದು ಆಯೋಜಿಸಲಾಗಿದ್ದ 'ವಾಕಥಾನ್-೨೦೨೫'ಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಯಿತು. '೯೦ ವರ್ಷಗಳ ಸಾರ್ಥಕ ಧ್ವನಿ: ಸಂಸ್ಕೃತಿ ಹಾಗೂ ಸದಭಿರುಚಿಯ ಸಂಪರ್ಕ ಸೇತು' ಎಂಬ ಘೋಷವಾಕ್ಯದೊಂದಿಗೆ ನಡೆದ ಜಾಥಾದಲ್ಲಿ ನಾಡಿನ ಮಾಜಿ ಕ್ರಿಕೆಟಿಗ ದೊಡ್ಡ ಗಣೇಶ, ಖ್ಯಾತ ಚಲನಚಿತ್ರ ನಟ ಅನಿರುದ್ಧ ಜತ್ಕಾರ್ ಅವರೊಂದಿಗೆ ಬೆಂಗಳೂರು ಆಕಾಶವಾಣಿ ಕೇಂದ್ರದ ಉಪಮಹಾನಿರ್ದೇಶಕರಾದ ಕೆ.ಪಿ.ಸಂಜೀವ್, ನಿರ್ದೇಶಕರು ಹಾಗೂ ಕಾಯಕ್ರಮ ಮುಖ್ಯಸ್ಥರಾದ ಎ.ಎಸ್.ಶಂಕರನಾರಾಯಣ, ಆಕಾಶವಾಣಿ ಸಿಬ್ಬಂದಿ, ಕ್ರೀಡಾಪಟುಗಳು ಸೇರಿದಂತೆ ೩೦೦ಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು. ಬೆಂಗಳೂರಿನ ರಾಜಭವನ ರಸ್ತೆಯಲ್ಲಿರುವ ಆಕಾಶವಾಣಿ ಕೇಂದ್ರದಿಂದ ಆರಂಭವಾದ ಜಾಥಾ, ಕಬ್ಬನ್ ಪಾರ್ಕ್ ಮೂಲಕ ಸಾಗಿ ವಿಧಾನಸೌಧ ಎದುರಗಡೆಯಿಂದ ಸಂಚರಿಸಿ, ಆಕಾಶವಾಣಿ ಕೇಂದ್ರದಲ್ಲಿ ಕೊನೆಗೊಂಡಿತು. ಭಾಗವಹಿಸಿದವರೆಲ್ಲರಿಗೂ ಪ್ರಮಾಣಪತ್ರ ನೀಡಲಾಯಿತು. ದಶಕಗಳ ಕಾಲ ನಾಡಿನ ಕಲೆ, ಸಾಹಿತ್ಯ ಮತ್ತು ಪರಂಪರೆಯನ್ನು ಮನೆಮನೆಗೆ ತಲುಪಿಸಿದ ಆಕಾಶವಾಣಿಯ ಮೈಲಿಗಲ್ಲನ್ನು ಸ್ಮರಿಸಲು ಹಾಗೂ ನಾಡಿನ ಸಂಸ್ಕೃತಿ ಮತ್ತು ಸಾರ್ವಜನಿಕರ ನಡುವಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಈ ವಾಕಥಾನ್ ಹಮ್ಮಿಕೊಳ್ಳಲಾಗಿತ್ತು.

<><><><>

ಮುಂಚೂಣಿಯ ಆರೋಗ್ಯ ರಕ್ಷಣಾ ವಿತರಣೆಯನ್ನು ಬಲಪಡಿಸಲು ಪ್ರಾಥಮಿಕ ಆರೋಗ್ಯ ರಕ್ಷಣಾ ತಂಡಗಳಿಗೆ ಸಮಗ್ರ ತರಬೇತಿಯನ್ನು ಪ್ರಾರಂಭಿಸಿರುವುದಾಗಿ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ತಿಳಿಸಿದ್ದಾರೆ. ಈ ತರಬೇತಿಯು, ಭಾರತದ ಮುಂಚೂಣಿಯ ಆರೋಗ್ಯ

ಕಾರ್ಯಪಡೆಯನ್ನು ಕೊನೆಯ ಮೈಲಿಯಲ್ಲಿ ಸಮಗ್ರ, ಜನ-ಕೇಂದ್ರಿತ ಆರೈಕೆಯ ಆತ್ಮವಿಶ್ವಾಸ ಮೂಡಿಸುತ್ತದೆ. ಪ್ರಾಥಮಿಕ ಆರೋಗ್ಯ ರಕ್ಷಣಾ ತಂಡಗಳಿಗೆ ಸಮಗ್ರ ತರಬೇತಿಯು ವಿಭಜಿತ ಸಾಮರ್ಥ್ಯ ನಿರ್ಮಾಣದಿಂದ ಏಕ, ರಚನಾತ್ಮಕ ಮತ್ತು ಸಾಮರ್ಥ್ಯ-ಚಾಲಿತ ಚೌಕಟ್ಟಿಗೆ ನಿರ್ಣಾಯಕ ಬದಲಾವಣೆಯನ್ನು ಸೂಚಿಸುತ್ತದೆ ಎಂದು ಹೇಳಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ, ಸಮಗ್ರ ಪ್ರಾಥಮಿಕ ಆರೋಗ್ಯ ರಕ್ಷಣೆ ಮತ್ತು ಸಮುದಾಯಕ್ಕೆ ಆರೋಗ್ಯ ರಕ್ಷಣೆ ಒದಗಿಸುವುದು ಇದರ ಉದ್ದೇಶವಾಗಿದ್ದು, ಈ ಹಿನ್ನೆಲೆಯಲ್ಲಿ ಜನರು ವಾಸಿಸುವ ಸ್ಥಳದ ಬಳಿ ಆರೋಗ್ಯ  ಸೌಲಭ್ಯಗಳನ್ನು ಕಲ್ಪಿಸಲು ಒತ್ತು ನೀಡಲಾಗಿದೆ ಎಂದರು. ಆರೈಕೆಯ ಗುಣಮಟ್ಟವನ್ನು ಸುಧಾರಿಸಲು, ಉನ್ನತ ಮಟ್ಟದ ಸೌಲಭ್ಯಗಳ ಮೇಲಿನ ಹೊರೆಯನ್ನು ಕಡಿಮೆ ಮಾಡಲು ಮತ್ತು ಆರೋಗ್ಯ ವ್ಯವಸ್ಥೆಯಲ್ಲಿ ಸಾರ್ವಜನಿಕ ನಂಬಿಕೆಯನ್ನು ಬಲಪಡಿಸಲು ಉತ್ತಮ ತರಬೇತಿ ಪಡೆದ ಮತ್ತು ಆತ್ಮವಿಶ್ವಾಸದ ಪ್ರಾಥಮಿಕ ಆರೋಗ್ಯ ಕಾರ್ಯಪಡೆ ಅತ್ಯಗತ್ಯ ಎಂದು ಸಚಿವಾಲಯ ತಿಳಿಸಿದೆ. ಸಮಗ್ರ ತರಬೇತಿ ಮಾಡ್ಯೂಲ್‌ಗಳು ಪ್ರಾಥಮಿಕ ಆರೋಗ್ಯ ರಕ್ಷಣಾ ತಂಡಗಳು ಸಮುದಾಯಗಳು ಮತ್ತು ಆರೋಗ್ಯ ವ್ಯವಸ್ಥೆಯ ನಡುವೆ ನಂಬಿಕೆ ಬಲಪಡಿಸಿ,  ಸಮಗ್ರ, ಜನ-ಕೇಂದ್ರಿತ ಆರೈಕೆಯನ್ನು ನೀಡಲು ಅನುವು ಮಾಡಿಕೊಡುತ್ತದೆ. ಇದು ಕೇವಲ ತರಬೇತಿ ಸುಧಾರಣೆ ಮಾತ್ರವಲ್ಲದೆ, ಭಾರತದಲ್ಲಿ ಸಾರ್ವಜನಿಕ ಆರೋಗ್ಯದ ಭವಿಷ್ಯದಲ್ಲಿ ಒಂದು ಕಾರ್ಯತಂತ್ರದ ಹೂಡಿಕೆಯಾಗಿದೆ ಎಂದು ಸಚಿವಾಲಯ ಹೇಳಿದೆ.

<><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದು ಕೋಲ್ಕತ್ತಾದಲ್ಲಿ ನೂತನವಾಗಿ ಆಯ್ಕೆಯಾದ ಬಿಜೆಪಿ ಶಾಸಕರೊಂದಿಗೆ ಮಹತ್ವದ ಸಭೆ ನಡೆಸಲಿದ್ದಾರೆ. ಈ ಸಭೆಯಲ್ಲಿ ಪಕ್ಷದ ಶಾಸಕಾಂಗ ನಾಯಕನ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಖ್ಯಾತ ಕವಿ ರವೀಂದ್ರನಾಥ ಠಾಗೋರ್ ಅವರ ಜನ್ಮದಿನದ ಸಂದರ್ಭದಲ್ಲಿ ರಾಜ್ಯದ ಮೊದಲ ಬಿಜೆಪಿ ಸರ್ಕಾರ ರಚನೆಯಾಗಲಿದ್ದು ನೂತನ ಮುಖ್ಯಮಂತ್ರಿ ಹಾಗೂ ಸಚಿವ ಸಂಪುಟದ ಸದಸ್ಯರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಸಮಾರಂಭಕ್ಕೆ ಸಕಲ ಸಿದ್ಧತೆಗಳು ನಡೆಯುತ್ತಿದ್ದು, ಅಗತ್ಯ ಆಡಳಿತಾತ್ಮಕ ಸಭೆಗಳೊಂದಿಗೆ ಬಿಗಿ ಭದ್ರತಾ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ಈ ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿಯ ಹಿರಿಯ ನಾಯಕರು ಹಾಗೂ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸುವ ನಿರೀಕ್ಷೆಯಿದೆ. ಜತೆಗೆ ಬಿಜೆಪಿ ಮತ್ತು ಎನ್‌ಡಿಎ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಸಹ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ತಮಿಳುನಾಡಿನಲ್ಲಿ, ಹೊಸ ಸರ್ಕಾರ ರಚನೆ ವಿಳಂಬವಾಗುತ್ತಿರುವುದರಿಂದ, ರಾಜ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಸಾಕಷ್ಟು ಏರಿಳಿತ ಕಂಡುಬರುತ್ತಿದೆ. ಬಹುಮತ ಸಾಬೀತುಪಡಿಸಲು ಮ್ಯಾಜಿಕ್ ಸಂಖ್ಯೆ ೧೧೮ ತಲುಪಲು ಮಾತುಕತೆಗಳು ನಡೆಯುತ್ತಿವೆ. ಇದೇ ವೇಳೆ ಡಿಎಂಕೆ ಮತ್ತು ಎಐಎಡಿಎಂಕೆ ನಿನ್ನೆ ಹೊಸದಾಗಿ ಆಯ್ಕೆಯಾದ ಶಾಸಕರ ಶಾಸಕಾಂಗ ಪಕ್ಷದ ಸಭೆಗಳನ್ನು ನಡೆಸಿದ್ದವು.  ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಪಳನಿಸ್ವಾಮಿ ಅವರನ್ನು ಪುದುಚೇರಿಯಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಏಕೈಕ ಅತಿದೊಡ್ಡ ಪಕ್ಷಕ್ಕೆ ಬೆಂಬಲ ನೀಡುವ ವಿಷಯದ ಕುರಿತು ವಿಸಿಕೆ, ಸಿಪಿಐ ಮತ್ತು ಸಿಪಿಐಎಂ ನ ಹೊಸದಾಗಿ ಆಯ್ಕೆಯಾದ ಶಾಸಕರ ನಿರ್ಣಾಯಕ ಸಭೆ ಇಂದು ನಡೆಯಲಿದೆ.

<><><>

ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ. ನಿನ್ನೆ, ಲಕ್ನೋದ ಏಕಾನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯಕ್ಕೆ ಮಳೆ ಅಡ್ಡಿಯಾದ ಹಿನ್ನೆಲೆ ಲಕ್ನೋ ಸೂಪರ್ ಜೈಂಟ್ಸ್ ತಂಡವು ಡಿಎಲ್‌ಎಸ್ ನಿಯಮದ ಪ್ರಕಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ೯ ರನ್‌ಗಳಿಂದ ಸೋಲಿಸಿತು. ಗೆಲುವಿಗಾಗಿ ೨೧೩ ರನ್‌ಗಳನ್ನು ಬೆನ್ನಟ್ಟಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ೧೯ ಓವರ್‌ಗಳಲ್ಲಿ ೮ ವಿಕೆಟ್‌ಗೆ ೨೦೩ ರನ್ ಗಳಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ ೧೯ ಓವರ್‌ಗಳಲ್ಲಿ ೩ ವಿಕೆಟ್‌ಗೆ ೨೦೯ ರನ್ ಗಳಿಸಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>